ಶ್ರೀ ಕೆ. ಮಲ್ಲಪ್ಪ.—9-1-1963 ರಲ್ಲಿ ಶಿಫಾರಸು ಮಾಡಿದ್ದೇವೆ. ಶೀಘ್ರದಲ್ಲಿ ಬರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಎಸ್. ಹುಲಕೋಟಿ.—ಧಾರವಾಡ ಜಿಲ್ಲೆಯಲ್ಲಿ ಎಷ್ಟು ಲೈಸೆನ್ಸ್ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಎಲ್ಲ ಜಿಲ್ಲೆಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಒಂದು ಸಹಕಾರ ಸಂಘ ಇರಬೇಕೆಂದಿದೆ. ಎಲ್ಲ ತಾಲ್ಲೂಕಿನಲ್ಲಿಯ ಸಹಕಾರಿ ಸಂಘಗಳಿಗೆ ಕೊಡಬೇಕೆಂದು ಶಿಫಾರಸು ಮಾಡಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಬ್ಬಿಣದ ಸಾಮಗ್ರಿಗಳನ್ನು ರೈತರುಗಳಿಗೆ ಮಾರಾಟ ಮಾಡಲು ಸಾಧ್ಯವಾಗುವಂಥ ಗ್ರಾಮಸ್ಥರುಗಳನ್ನು ಕಬ್ಬಿಣ ಮತ್ತು ಉಕ್ಕಿನ ವ್ಯಾಪಾರಗಾರರುಗಳನ್ನಾಗಿ ನೇಮಕ ಮಾಡಲು ಸರ್ಕಾರದವರು ಉದ್ದೇಶಿಸಿರುವರೇ ಎಂದು ಕೇಳಿದ ಪ್ರಶ್ನೆಗೆ ಹಾಗೆಂದು ಉತ್ತರ ಕೊಟ್ಟಿದೆ. ಹಾಗಾದರೆ ಗ್ರಾಮಾಂತರ ಪ್ರದೇಶದಲ್ಲಿರುವಂಥ ಖಾಸಗಿ ಎಷ್ಟು ಜನಕ್ಕೆ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಲೈಸೆನ್ಸ್ ಒದಗಿಸಿ ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಸ್ವಾಕಿನ್ಸ ಅವರಿಗೆ ಲೈಸೆನ್ಸ್ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—4 ಜನ ನಮ್ಮ ಸ್ಪೇಟ್‌ನಲ್ಲಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಯಾವ ಆಧಾರದಮೇರೆ ಈ ಅರ್ಜಿಗಳನ್ನು ಶಿಫಾರಸು ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಅವರ ಯೋಗ್ಯತೆ, ಸ್ಟಾಕ್ ಮಾಡುವ ಶಕ್ತಿ, ವ್ಯಾಪಾರ ಎಷ್ಟಿದೆ, ಅವಶ್ಯಕತೆ ಎಷ್ಟಿದೆ ನೋಡಿ, ಎಲ್ಲ ಅಂಶ ಗಣನೆಗೆ ತೆಗೆದುಕೊಂಡು ಶಿಫಾರಸು ಮಾಡಿದ್ದೇವೆ.

Sri H. R. KESHAVA MURTHY.—What steps have you taken to prove the integrity of the persons or organisations in their distribution?

Sri K. MALLAPPA.—The presumption is that all people are honest, and exception is to be proved. If a particular person is dishonest, then investigation will be made and disciplinary action will be taken against him.

Sri G. V. GOWDA.—May I know the additional quantity of Iron and Steel likely to be allotted to our State ?

Sri K. MALLAPPA.—Any quantity can be allotted. Except sheets below 16 gauge, all other materials does not require any quota certificate. Any amount of materials can be given.

Number of new Bus Routes and Extensions sanctioned by the Regional Transport Authority, Kolar.

*Q.—243. **Sri P. VENKATAGIRIYAPPA** (Kolar).—

Will the Government be pleased to state :—

(*a*) the number of new bus routes and extensions sanctioned from 1-1-1960 by the Regional Transport Authority, Kolar, with names and extent of routes ;

(*b*) whether they are aware that most of the licence holders have leased these bus routes to bus operators on monthly payment ;

(*c*) if so, the action taken by them to prevent such practices ?

A.—Sri R. M. PATIL (Minister for Home).—

(*a*) No. of new routes ... 24
No. of extensions ... 25

The statement showing the names and extent of routes is placed on the Table of the House. Placed in the Mysore Legislature Library *vide* No. 8, dated 21-3-1963.

(*b*) No.

(*c*) Does not arise in view of reply to clause (*b*) above.

ಶ್ರೀ ಪಿ. ವೆಂಕಟಗಿರಿಯಪ್ಪ.—ಹೊಸ ರೂಟುಗಳ ನಂಬ್ರೆ 24 ಮತ್ತು ಎಸ್ಟ್ರಣಗಳ ನಂಬ್ರೆ 25 ಎಂದು ಹೇಳಿದ್ದೀರಿ. ಕೋಲಾರ ಜಿಲ್ಲೆಯಲ್ಲಿ ಇವುಗಳನ್ನು ಕೊಡುವ ಹೆಚ್ಚಿನ ಅವಶ್ಯಕತೆ ಇದ್ದಿತೇ ?

†ಶ್ರೀ ಆರ್. ಎಂ. ಪಾಟೀಲ್.—ಅವಶ್ಯಕತೆಯಿತ್ತು ಎಂದು ಕೊಟ್ಟಿದೆ.

ಶ್ರೀ ಇ. ನಾರಾಯಣಗೌಡ.—ಬಸ್ ಮಾಲೀಕರು ಬೀರೆ ಇದ್ದು ಕಮೀಷನ್ ಏಜಂಟರು ಕೆಲಸ ಮಾಡುತ್ತಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದರೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವದರ ಬದಲು ನೀವು ನಮ್ಮ ಗಮನಕ್ಕೆ ತಂದುಕೊಟ್ಟರೆ ಖಂಡಿತವಾಗಿ ವಿಚಾರಣೆ ಮಾಡುತ್ತೇವೆ.

Sri GANJI VEERAPPA.—Is it not a fact that Road Transport Corporation Buses are running in the same route where private Buses are also running in Kolar District ?

Sri R. M. PATIL.—It is so.

Sri GANJI VEERAPPA.—Is it not a fact that much loss is incurred on this account ?

Sri R. M. PATIL.—To some extent it is true.

Ministers and Deputy Ministers who are residing in the Rented Buildings

*Q.—273. Sri S. SIVAPPA (Sravanabelagola).—

Will the Government be pleased to state :—

(*a*) how many of the Ministers and Deputy Ministers are residing in the rented buildings ;

(*b*) the amount of rent paid to those buildings every month (details may be given for each building) ?

A.—Sri S. NIJALINGAPPA (Chief Minister).—

(*a*) Ministers...3
Dy. Ministers...4

(*b*) *Vide* statement given below.